ಧಾರವಾಡ	48.27
ಹಾವೇರಿ	3.77
ಗದಗ	40.27
ರಾಯಚೂರು	2.47
ಬಳ್ಳಾರಿ	37.91
ಬೀದರ್	12.77
ಗುಲ್ಬರ್ಗ	10.50

ಶಿವಮೊಗ್ಗ ಜಿಲ್ಲೆಯ ಕೋರ್ಟ್‌ವಾರು ವ್ಯಯಿಸಲಾಸ ಮೊತ್ತ
(ಲಕ್ಷರೂಗಳಲ್ಲಿ)

1)	ಶಿವಮೊಗ್ಗ ನ್ಯಾಯಾಲಯ ಕಟ್ಟಡ	ರೂ.0.80
2)	ಭದ್ರಾವತಿ ನ್ಯಾಯಾಲಯ ಕಟ್ಟಡ	ರೂ.0.18
3)	ಸಾಗರ ನ್ಯಾಯಾಲಯ ಕಟ್ಟಡ	ರೂ.1.82
4)	ಶಿಕಾರಿಪುರ –"–	ರೂ.1.38
5)	ತೀರ್ಥಹಳ್ಳಿ –"–	ರೂ.–
6)	ಸೊರಬ ಮತ್ತು ಹೊಸದುರ್ಗ	ಖಾಸಗಿ ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸಲಾಗುತ್ತಿದೆ.

ಉತ್ತರ ಕರ್ನಾಟಕ ಅಭಿವೃದ್ಧಿ

3414 (3543) :-ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ (ಹುಬ್ಬಳ್ಳಿ) ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಅಭಿವೃದ್ಧಿಗಾಗಿ ಹೊಸದಾಗಿ ನಿರ್ಮಿಸಿರುವ ಅಬಿವೃದ್ಧಿ ಆಯುಕ್ತರ ಕಛೇರಿ ಅಸ್ತಿತ್ವಕ್ಕೆ ಬಂದಿದೆಯೆ; ಅದರ ರೂಪರೇಷಗಳೇನು;

ಆ) ಪ್ರತಿಯೊಂದು ಇಲಾಖೆಯ ಅಭಿವೃದ್ಧಿ ಕೆಲಸಕ್ಕಾಗಿ ಸರ್ಕಾರೇತರ ಸಮಿತಿ ರಚಿಸುವ ವಿಚಾರ ಸರ್ಕಾರ ಪರಿಶೀಲನೆಯಲ್ಲಿದೆಯೇ; ಇದ್ದಲ್ಲಿ ಸಮಿತಿಯಲ್ಲಿ ಯಾರು ಇರಬೇಕೆಂಬ ನಿಯಮ ರಚಿಸಲಾಗಿದೆ; (ಮಾಹಿತಿ ಒದಗಿಸುವುದು)

ಶ್ರೀ ಆರ್.ಬಿ. ತಿಮ್ಮಾಪುರ್ (ಯೋಜನಾ ಸಚಿವರು):

ಅ) ಹೌದು

ರೂಪರೇಷೆಗಳು ಈ ಕೆಳಗಿನಂತಿದೆ.

1) ಉತ್ತರ ಕರ್ನಾಟಕ ಪ್ರದೇಶಾಭಿವೃದ್ಧಿಗೆ ಕೇಂದ್ರೀಕೃತ ಮಾರ್ಗಸೂತ್ರಗಳನ್ನು ಒದಗಿಸುವುದು

2) ಉತ್ತರ ಕರ್ನಾಟಕ ಎಲ್ಲಾ ಅಭಿವೃದ್ಧಿ ಚಟುವಟಿಕೆಗಳನ್ನು ಸೂಕ್ತ ರೀತಿಯಲ್ಲಿ ಸಮನ್ವಯಗೊಸುವುದು.

3) ಉತ್ತರ ಕರ್ನಾಟಕ ಎಲ್ಲಾ ಅಚ್ಚುಕಟ್ಟು ಪ್ರಾಧಿಕಾರಗಳ ಮತ್ತು ಪ್ರದೇಶಾಭಿವೃದ್ಧಿ ಮಂಡಳಿಗಳ ಅಭಿವೃದ್ಧಿ ಚಟುವಟಿಕೆಗಳ ಉಸ್ತುವಾರಿ.

4) ಈ ಪ್ರದೇಶದಲ್ಲಿ ಉದ್ಭವಿಸತಕ್ಕ ಸಮಸ್ಯೆಗಳ ಬಗ್ಗೆ ಸರ್ಕಾರದೊಂದಿಗೆ ಸಮಾಲೋಚನೆ ಮತ್ತು ಸರ್ಕಾರಕ್ಕೆ ಸಂಭವನೀಯ ಪರಿಹಾರಗಳನ್ನು ಸೂಚಿಸುವುದು.

ಆ) ಇಲ್ಲ

ಉದ್ಭವಿಸುವುದಿಲ್ಲ